ನಿಯಮ ೩೩೪ರ ಮೇರೆಗೆ

(೧) ಪುತ್ತೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಮಳೆಯಿಲ್ಲದೆ ಬೆಳೆ ಹಾಳಾಗಿರುವುದು

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕು ಹಾಗೂ ಬಂಟ್ವಾಳ ತಾಲ್ಲೂಕಿಗೆ ಹೊಂದಿಕೊಂಡು ದಕ್ಷಿಣ ಕನ್ನಡದ ನಾನಾಕಡೆ ಮಳೆಯ ಅಭಾವದಿಂದಾಗಿ ಸುಗ್ಗಿ ಬೆಳೆಯು ಸಂಪೂರ್ಣವಾಗಿ ಹಾಳಾಗಿ ಹೋಗಿರುತ್ತದೆ. ಇದರಿಂದ ಭತ್ತದ ಬೆಳೆ ಮಾಡುವಂಥ ರೈತರಿಗೆ ವಿಪರೀತ ಕಷ್ಟನಷ್ಟ ಉಂಟಾಗಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಕ್ಷಿಪ್ರ ಸಮಯಕ್ಕೆ ನೆರವಿಗೆ ಬರದೇ ಹೋದರೆ ರೈತರಿಗೆ ಸುಗ್ಗಿ ಬೆಳೆಯನ್ನೇ ನಂಬಿರುವ ರೈತರಿಗೆ ಪರಿಹಾರ ಒದಗಿಸಿ ರೈತರಿಗೆ ಬಂದಂಥ ಅನಿರೀಕ್ಷಿತ ತೊಂದರೆಯನ್ನು ನಿವಾರಣೆ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ರಾಜ್ಯದ ಕೆಲವು ಭಾಗಗಳಲ್ಲಿ ಮುಂಗಾರು ಬೆಳೆಯ ವಿಫಲತೆಯಿಂದಾಗಿ ವಿಶೇಷವಾಗಿ ಮಲೆನಾಡು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬಿತ್ತಿದ ಭತ್ತದ ಬೀಜವು, ಸಕಾಲಕ್ಕೆ ಮಳೆಯಾಗದೇ ಅಥವಾ ಕೆಲವು ಸಂದರ್ಭಗಳಲ್ಲಿ ವಿಪರೀತ ಮಳೆಯಿಂದ, ನಾಶವಾಗಿ ರೈತರಿಗೆ ಬಹಳ ತೊಂದರೆಯಾಗಿದ್ದ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಇಂತಹ ರೈತರಿಗೆ ಪರ್ಯಾಯ ಬೆಳೆಗಳನ್ನು ಬೆಳೆದು ಆಗಿದ್ದ ಕಷ್ಟವನ್ನು ಸಾಕಷ್ಟು ಕಡಿಮೆ ಮಾಡುವ ಸಲುವಾಗಿ ಅವರಿಗೆ ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳ ಪರ್ಯಾಯ ಬೆಳೆಗಳನ್ನು ಎಲ್ಲೆಲ್ಲಿ ಬೆಳೆಯಲು ಸಾಧ್ಯ ಇದೆಯೋ ಅಲ್ಲಲ್ಲಿ ಬೆಳೆಯಲು ಅನುವು ಮಾಡಿಕೊಡುವ ಸಲುವಾಗಿ ಬೀಜಗಳನೊಳಗೊಂಡ ಮಿನಿಕಿಟ್ಸ್‌ಗಳನ್ನು ೨೦೦ ರೂಪಾಯಿಗಳಿಗೆ ಮೀರದಂತೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಉಚಿತವಾಗಿ ನೀಡಲು ಆದೇಶಗಳನ್ನು ಹೊರಡಿಸಲಾಗಿದೆ. ಈ ಚೀಲಗಳ ವಿತರಣೆ ಯೋಜನೆಯಲ್ಲಿ ಈ ಕೆಳಕಂಡ ಬೆಳೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕ್ರಮ ಸಂಖ್ಯೆ	ಬೆಳೆಯ ಹೆಸರು	ವಿಸ್ತೀರ್ಣ	ಆವಶ್ಯಕ ಬೀಜ (ಕೆ. ಜಿ. ಗಳ ಪ್ರಮಾಣದಲ್ಲಿ)	ಅಂದಾಜು ತಗಲುವ ವೆಚ್ಚ ರೂ. ಗಳಲ್ಲಿ)
೧.	ಸೂರ್ಯಕಾಂತಿ	೧ ಹೆಕ್ಟೇರು	೧೨	೧೫೩.೦೦
೨.	ನೆಲಗಡಲೆ	½ ಎಕರೆ	೨೦	೨೦೦.೦೦
೩.	ಹೆಸರು	೧ ಹೆಕ್ಟೇರು	೧೫	೧೬೫.೦೦
೪.	ಉದ್ದು	೧ ಹೆಕ್ಟೇರು	೧೫	೧೬೫.೦೦

೨. ಈ ಕೃಷಿ ಚೀಲಗಳನ್ನು ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಒಟ್ಟು ೨೫.೦೦ ಲಕ್ಷ ರೂ. ಗಳ ವೆಚ್ಚದಲ್ಲಿ ವಿತರಣೆ ಮಾಡಲು ಹೊರಡಿಸಲಾಗಿದೆ.

೩. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹ ಅಭಾವ ಪರಿಸ್ಥಿತಿ ಉಂಟಾಗಿಲ್ಲವೆಂದೂ ಹಾಗೂ ಕುಡಿಯುವ ನೀರು ಮತ್ತು ಮೇವು ಒದಗಿಸುವ ತೊಂದರೆಯೂ ಇರುವುದಿಲ್ಲವೆಂದೂ ವರದಿಯಾಗಿದೆ

೪. ಆದರೆ ಸುಗ್ಗಿ ಬೆಳೆ ಹಾಳಾಗಿ ಭತ್ತ ಬೆಳೆಯುವ ರೈತರಿಗೆ ನಷ್ಟ ಉಂಟಾಗಿ ಅವರು ತೊಂದರೆಯಾಗಿರುವ ಬಗ್ಗೆ ವರದಿ ಇರುವುದಿಲ್ಲ. ಈ ವಿಶಯವಾಗಿ ಜಿಲ್ಲಾಧಿಕಾರಿಗಳಿಂದ ತ್ವರಿತವಾಗಿ ವರದಿ ತರಿಸಿ, ಅಗತ್ಯವೆನಿಸಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(೨) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗಂಟೆನಹಳ್ಳಿ ಕೆರೆಯ ಬಲನಾಲೆಗೆ ಸೇತುವೆಯನ್ನು ರಚಿಸುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದಿಕೆರೆ ಹೋಬಳಿ ಗಂಟೆನಹಳ್ಳಿ ಕೆರೆಯ ಬಲನಾಲೆಗೆ ಅಡ್ಡವಾಗಿ ಒಂದು ಹಳ್ಳ ಹರಿಯುತ್ತಿದ್ದು, ಈ ಹಳ್ಳಕ್ಕೆ ಸೇತುವೆ ಮಾಡಿ ಪೈಪಿನ ಮೂಲಕ ಮುಂದಿನ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಬೇಕಾಗಿದೆ ಈ ಪೈಪು ಚಾನಲ್ ಮಾಡಲು ಉದ್ದೇಶಿಸಿ ಪೈಪುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿ ಇಲ್ಲಿಗೆ

ಮೂರು ವರ್ಷಗಳಾದರೂ ಈ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈ ಪೈಪು ಚಾನಲ್ ಮೂಲಕ ಮುಂದೆ ಹರಿಯುವ ಪೂರ್ಣ ನೀರು ಪರಿಶಿಷ್ಟ ವರ್ಗ ಮತ್ತು ಸಣ್ಣ ಹಿಡುವಳಿದಾರರಾದ ಬಡ ರೈತರ ಜಮೀನುಗಳಿಗೆ ಹಾಯುತ್ತದೆ. ಈ ಕೆರೆ ಪ್ರತಿವರ್ಷ ತುಂಬುತ್ತಿದ್ದು ಈ ಪೈಪು ಚಾನಲ್‌ಗೆ ಮುಂದೆ ಇರುವ ಶ್ರೀಮಂತ ಅಚ್ಚುಕಟ್ಟುದಾರರು ಮಾತ್ರ ಲಾಭ ಪಡೆಯುತ್ತಿದ್ದಾರೆ. ಆಕಡೆ ಕೆರೆಯ ಅಚ್ಚುಕಟ್ಟಿಗೆ ಸೇರಿದ ಪರಿಶಿಷ್ಟ ಜಾತಿ ಮತ್ತು ಸಣ್ಣ ಹಿಡುವಳಿದಾರರಾದ ಬಡ ರೈತರು ಈ ಪೈಪು ಚಾನಲ್ ಇಲ್ಲದ ಕಾರಣ ನೀರನ್ನು ಪಡೆದು ವ್ಯವಸಾಯ ಮಾಡಲು ಸಾಧ್ಯವಿಲ್ಲದೆ ಅನ್ಯಾಯವಾಗಿರುತ್ತದೆ ಆದ್ದರಿಂದ ಈ ಬಡ ಜನರಿಗೆ ನ್ಯಾಯವಾಗಿ ದೊರೆಯಬೇಕಾದ ನೀರನ್ನು ಪಡೆದು ಅನುಕೂಲ ಹೊಂದಲು ಸಾಧ್ಯವಾಗುವಂತೆ ಬೇಗ ಈ ಪೈಪು ಚಾನಲ್‌ನ್ನು ಮಾಡಿಸಿಕೊಡಬೇಕಾಗಿ ಈ ಮೂಲಕ ಲೋಕೋಪಯೋಗಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಲೋಪಯೋಗಿ ಖಾತೆ ಸಚಿವರ ಗಮನಕ್ಕೆ ತಂದು ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(3) ಬೆಂಗಳೂರೂರಿನಲ್ಲಿ ನಡೆದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ ಸದಸ್ಯರ ಸಮ್ಮೇಳನಕ್ಕೆ ತಗಲಿರುವ ವೆಚ್ಚ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳ ೩೧ರಂದು ಬೆಂಗಳೂರಿನಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರುಗಳ ಸಮ್ಮೇಳನ ನಡೆಯಿತು. ಸುಮಾರು ೬೦ ಸಾವಿರ ಜನರಿಗೆ ಊಟ–ವಸತಿ ಒದಗಿಸಲು ಲಕ್ಷಾಂತರ ರೂಪಾಯಿ ಸರ್ಕಾರ ವತಿಯಿಂದ ಖರ್ಚಾಯಿತು. ಈ ಬಾಬಿಗೋಸ್ಕರ ಮೊದಲು ಎಷ್ಟು ಹಣವನ್ನು ನಿಗಾಮಾಡಲಾಗಿತ್ತು ? ಆ ಪೈಕಿ ಎಷ್ಟು ಹಣ ಖರ್ಚಾಯಿತು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಯಾವುದಾದರೂ ಉದ್ದೇಶಗಳು ಸಾಧನೆ ಆಗಬೇಕಾದರೆ ಇಂಥ ಸಮ್ಮೇಳನಗಳು ಅವಶ್ಯಕ. ಆದರೆ ಮೊನ್ನೆ ಮಾಡಿದಂಥ ಸಮ್ಮೇಳನದಿಂದ ಯಾವುದೇ ಉದ್ದೇಶವೂ ನನಗೆ ತಿಳಿದಮಟ್ಟಿಗೆ ಸಾಧನೆ ಆಗಿಲ್ಲ ಕೇವಲ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಸಚಿವರು ಹಾಗೂ ಮುಖ್ಯ ಮಂತ್ರಿಗಳು ಮಾಡಿದಂಥ ಭಾಷಣವನ್ನು ಬಿಟ್ಟರೆ ಬೇರೆ ಯಾವ ಉದ್ದೇಶ ಸಾಧನೆಯೂ ಆಗಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರ ಸಮ್ಮೇಳನಗಳನ್ನು ಆಯಾಯ ಜಿಲ್ಲೆಗಳಲ್ಲೇ ಸಮಾವೇಶಗೊಳಿಸಿ ಆ ಸದಸ್ಯರುಗಳು ಯಾವ ರೀತಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಬೇಕು, ಅವರ ಕರ್ತವ್ಯಗಳೇನು ? ಮುಂತಾದುವುಗಳ ಬಗ್ಗೆ ತಿಳುವಳಿಕೆಯನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು, ಮತ್ತು ಹಣವೂ ಕೂಡ ಉಳಿತಾಯವಾಗುತ್ತಿತ್ತು. ನೀವು ಮಾಡಿದಂಥ ಸಮ್ಮೇಳನದಿಂದಾಗಿ ಸರ್ಕಾರದ ಹಣ ಪೋಲಾಯಿತೇ ಹೊರತು ಮತ್ತೆ ಯಾವುದೇ ಪ್ರಯೋಜನವೂ ಆಗಲಿಲ್ಲ. ಸರ್ಕಾರ ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಈ ಒಂದು ಸಮ್ಮೇಳನವನ್ನು ಮಾಡಿತೆಂದು ನನಗನ್ನಿಸುತ್ತದೆ. ಆದ್ದರಿಂದ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೆ, ವಿವರಗಳನ್ನು ತರಿಸಿ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸುತ್ತೇನೆ.

(4) ಮೈಸೂರಿನ ಪ್ರೀಮಿಯರ್ ಸ್ಟುಡಿಯೊ ಮಾಲೀಕರು ಅನಧಿಕೃತ ಕಟ್ಟಡ ಕಟ್ಟಿರುವ ಬಗ್ಗೆ

ಶ್ರೀ ವೇದಾಂತ ಹೆಮ್ಮಿಗೆ,—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿನ ಪ್ರೀಮಿಯರ್ ಸ್ಟುಡಿಯೋ ಮಾಲೀಕರು ಪರವಾನೆ ಇಲ್ಲದೆ ಅನಧಿಕೃತ ಕಟ್ಟಡಗಳನ್ನು ಕಟ್ಟಿರುವುದಲ್ಲದೆ ಸ್ಟುಡಿಯೋಗಾಗಿ ಪರವಾನೆಯಿತ್ತಿರುವುದನ್ನು ದುರುಪಯೋಗಪಡಿಸಿಕೊಂಡು ಅಲ್ಲಿಯ ಶೂಟಿಂಗ್ ಷೆಡ್‌ಗಳನ್ನು ಕಾರ್ಖಾನೆ ಹಾಗೂ ಸಾರಾಯಿ ದಾಸ್ತಾನಿಗೆ ಬಾಡಿಗೆ ಇತ್ತಿರುವ ಬಗ್ಗೆ ಮೈಸೂರು ನಗರ ಯೋಜನಾ ಪ್ರಾಧಿಕಾರ ೨ ವರ್ಷಗಳ ಹಿಂದೆ ಸರ್ಕಾರದ ಗಮನಕ್ಕೆ ತಂದು ಸರ್ಕಾರವು ಶ್ರೀ ಮೇಲುಕೋಟೆ ಎಂಬ ಅಧಿಕಾರಿಯವರನ್ನು ನೇಮಕ ಮಾಡಿ ತನಿಖೆ ನಡೆಸಿ ವರದಿ ಕೇಳಿತ್ತು. ಶ್ರೀ ಮೇಲ್ಕೋಟೆಯವರು